



ಖುಷಿಪಡುತ್ತಿದ್ದರು. ಅವರಿಗೂ ಈ ಮುಪ್ಪಿನಲ್ಲಿ ಬಾಲ್ಯ ಸಿಕ್ಕಿಬಿಡುತ್ತಿತ್ತು, ಎಂದು ಕಮಲಜ್ಜಿ ಆ ಕ್ಷಣ ಸಿಗದಿದ್ದುದಕ್ಕಾಗಿ ನೊಂದುಕೊಳ್ಳುತ್ತಿದ್ದಳು. ಈ ದಟ್ಟ ಕಾಡಿನ ಅಂಚಿನ ಒಂಟಿ ಮನೆ, ಗೊಂಡೆಬಾಲದ ಬೆಕ್ಕಿನ ಸ್ಪರ್ಶ, ಕೂಡಿಟ್ಟಿರುವ ಒಂದಷ್ಟು ದುಡ್ಡು ಅವಳಿಗೇನೋ ಧೈರ್ಯ ಕೊಟ್ಟಿತ್ತು. ಕಾಡು ಮೇಡು ಅಲೆಯುತ್ತ ಆಟವಾಡಲು ಬರುತ್ತಿದ್ದ ಅಂತು, ಅವನ ತರಲೆ, ಚೇಷ್ಟೆಗಳು, ನಗು, ನಡಿಗೆ ಎಲ್ಲಾ ನೋಡುತ್ತ ನೋಡುತ್ತ ಕಮಲಜ್ಜಿಗೆ ತನಗಿರದ ಮಗನೂ, ಮೊಮ್ಮಗನೂ ಅವನಲ್ಲೇ ಕಾಣುತ್ತಿದ್ದರು. ಹಾಗೆ ಕಾಡಿಗೆ ಆಟವಾಡಲು ಬರುವಾಗೆಲ್ಲ ಅಂತು, ತನ್ನದೇ ಮನೆಯಂತೆ ಕಮಲಜ್ಜಿಯ ಅನುಮತಿಯನ್ನೇ ಕೇಳದೇ ಪುಟ್ಟ ಮನೆಯ ಕಂಬಗಳ ಮಧ್ಯೆ, ಜಗುಲಿಯ ಸಂದು ಸಂದುಗಳಲ್ಲಿ ಓಡಾಡಿಕೊಂಡಿರುತ್ತಿದ್ದ. ಅವನನ್ನು ತನ್ನ ಜೀವದಂತೆಯೇ ಕಾಣುತ್ತಿದ್ದ ಕಮಲಜ್ಜಿಗೆ ಅವನು ತನ್ನ ಮನೆಯಂತೆಯೇ ಓಡಾಡಿಕೊಂಡಿರುವುದು ನೋಡಿ ಅಭಯದ ಸ್ವರ್ಗವೇ ಕೈಗೆ ಸಿಕ್ಕಂತಾಯಿತು. ತನ್ನ ಬಳಿ ಇದ್ದ ಒಂದಿಷ್ಟು ಸಾಮಾನುಗಳಿಂದ ಅಂತುಗೆ ಸಕ್ಕರೆ ಮಿಠಾಯಿ ಮಾಡಿಕೊಟ್ಟಳು, ಬೆಲ್ಲದ ಉಂಡೆ, ಕೊಬ್ಬರಿ ಮಿಠಾಯಿ, ಸಿಕ್ಕ ಸಿಕ್ಕ ಸಿಹಿಗಳನ್ನು ಮಾಡುತ್ತ ಅವನು ಆಟವಾಡಲು ಬರುವಾಗಲೆಲ್ಲಾ ಅವನಿಗೆ ಸಂಭ್ರಮದಿಂದ ಕೊಡುತ್ತಿದ್ದಳು. ಅವನು ಒಂದು ದಿನ ಮನೆ ಕಡೆ ಸುಳಿಯದೇ ಇದ್ದಿದ್ದರೆ ಚಡಪಡಿಸುತ್ತಿದ್ದಳು. ಅಂತುಗೂ ತನ್ನ ತಮಾಷೆ, ಚೇಷ್ಟೆ, ಆಸೆ, ನಿರಾಶೆ, ಕನಸುಗಳನ್ನು ಹೇಳಿಕೊಳ್ಳಲು ಕಮಲಮ್ಮನ ಮನೆಯೇ ಮಾಯಾಲೋಕದಂತಾಯ್ತು, ಆಟದ ಬಯಲಿನಂತಾಯ್ತು.

ಯಾವಾಗಲೂ ಸಾಯಂಕಾಲ ಅಂತು ಜೊತೆ ಸೇರಿ ಕಮಲಮ್ಮ ಮಗುವಾಗುತ್ತಿದ್ದಳು.